ನಾವು ಮ್ಯಾರಾಟ ಮಾಡಿದ್ದೇವೆ. ಒಂದು ಮಿಷನ್ ಯಾವುದೋ ಒಂದು ಪಾರ್ಟ್ಸ್ substitute ಮಾಡಿದ್ದೇವೆ ಎಂದರೆ ಇಡೀ ಕಂಪನಿಗೆ ಲುಕ್ಸಾನು ಆಗುತ್ತದೆ. ಇದಕ್ಕೆ ಒಂದಿಬ್ಬರು ಆಫೀಸರ್ಸ್ ಕಾರಣರು ಎನ್ನುವ Find devils all our surroundings ಈ ತರಹ ನಿಮ್ಮ ದೃಷ್ಟಿಯಲ್ಲಿ ಎಲ್ಲಾ ಕಡೆಯಲ್ಲೂ ದೆವ್ವಗಳನ್ನು ಕಾಣುತ್ತಾ ಇದ್ದರೆ ಅದಕ್ಕೆ ನಾವು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಆರ್. ವೆಂಕಟರಾಮಯ್ಯ.— ತಾವು ದೆವ್ವಗಳನ್ನು ಬೆಳಸುತ್ತಿದ್ದೀರಿ. ನೀವು ಒಳ್ಳೆಯವರನ್ನು ಅಪ್ರಿಷಿಯೇಟ್ ಮಾಡಿ ನಾನು ಅದನ್ನು ಕೇಳುವುದಿಲ್ಲ. ನವಂಗೆ ಬೇಕಾಗಿರುವುದು, ಈ ದೆವ್ವಗಳನ್ನು ಬೆಳೆಸುವುದು ಬೇಡ, ಭೂತಗಳಿಗೆ ಆಹಾರ ಕೊಡುವುದೂ ಬೇಡ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ೩೦ ಕೋಟಿ ರೂಪಾಯಿಗಳು ನಷ್ಟವಾಗಿದೆ. ಈ ಭೂತಗಳು ನುಂಗಿವೆ, ಈ ಭೂತಗಳನ್ನು ಏಕೆ ಬೆಳೆಸುತ್ತಿದ್ದೀರಿ ? ಅದಕ್ಕೋಸ್ಕರ ನಾನು ಕೇಳಿದ್ದುದು ಈ ಡಿಫೆಕ್ಟೀವ್ ಮಿಷನ್‌ನಿಂದ ಎಷ್ಟು ನಷ್ಟವಾಯಿತು ? ಯಾರು ಈ ಮಿಷನ್ ಕಳುಹಿಸಿದ್ದುದು ? ಇದನ್ನು ಪರೀಕ್ಷೆ ಮಾಡದೇ ಏಕೆ ಕಳುಹಿಸಿದರು ? ಇಂತಹ ಆಫೀಸರ್ ಮೇಲೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ ? ಎಷ್ಟು ನಷ್ಟವಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿ ?

ಶ್ರೀ ಜೆ. ಹೆಚ್. ಪಟೇಲ್.— ನಾನು ಹೇಳಿದ್ದೇನೆ, ಈ ತರಹದ ಸಣ್ಣ ಸಣ್ಣ ಯಾಂತ್ರಿಕ ತೊಂದರೆಗಳು ಪ್ರತಿಯೊಂದು ಕಾರ್ಖಾನೆಗಳಲ್ಲೂ ಬರುತ್ತವೆ. ಇದನ್ನು ಕಂಡುಹಿಡಿದು, ಇದನ್ನು ಸರಿಪಡಿಸಿದ ಮೇಲೆ, ನಾವು ಈಗಾಗಲೇ ಬೇರೆ ಯೂನಿಟ್ಸ್ ಕೊಟ್ಟಿದ್ದೇವೆ. All of them are running well. ಆದ್ದರಿಂದ, ಆ ಇಂಜಿನಿಯರುಗಳು ಯಾರು, ಏಕೆ ತಪ್ಪು ಮಾಡಿದ್ದಾರೆಂದು ಕೇಳಿದರೆ ಹೇಗೆ ? ಮಾನ್ಯ ಅಧ್ಯಕ್ಷರೇ, ಈ ದೋಷವನ್ನು ಸರಿಪಡಿಸಿ ಆಗಿದೆ. ಈಗ ಎಲ್ಲೂ ಕಂಪ್ಲೇಂಟ್ ಇಲ್ಲ. ಯಾವ ಅಧಿಕಾರಿಗಳು ಇದಕ್ಕೆ ಹೊಣೆ, ಎಲ್ಲಿಂದ ಬಂದರು, ಎಂಬುದಕ್ಕೆಲ್ಲಾ ಉತ್ತರ ಹೇಳುವುದು ಇಲ್ಲಿ ಅಪ್ರಕೃತ. ಸಮಯ ಬಂದಲ್ಲಿ ಯಾವುದಾದರೂ ಅಧಿಕಾರಿ ವರ್ತನೆಯಿಂದ ಸಂಸ್ಥೆಗೆ ಹಾನಿ ಆಗುವುದಾದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ನಿಯಮ ೩೩ಳಿರ ಮೇರೆಗೆ

೧. ದಕ್ಷಿಣ ಕನ್ನಡದ ಪಂಲೆನಾಡು ಪ್ರದೇಶಗಳಲ್ಲಿ ಕಾಡನ್ನು ಸಂರಕ್ಷಿಸುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಪಂಲೆನಾಡು ಪ್ರದೇಶದಲ್ಲಿ, ಪಶ್ಚಿಮ ಘಟ್ಟಗಳ ತಪ್ಪಲಲ್ಲಿ "ಪಶ್ಚಿಮ ಘಟ್ಟ ಉಳಿಸಿ" ಎಂಬ ವಿಚಾರದ ಪಾದಯಾತ್ರೆ ಕಳೆದ ಒಂದೆರಡು ತಿಂಗಳುಗಳ ಹಿಂದೆ ಯಶಸ್ವಿಯಾಗಿ ನಡೆದಿದೆಯಷ್ಟೆ. ಅರಣ್ಯ ಸಂಪತ್ತು ನಾಶವಾಗಬಾರದು, ಅರಣ್ಯದ ನಾಶವಾಗಬಾರದು, ಈಗಾಗಲೇ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತಾ ಬಂದು ಹಸಿರು ಮಾಯವಾಗುತ್ತಿದೆ ಆದ ಕಾರಣ ಪಶ್ಚಿಮ ಘಟ್ಟಗಳ ಅರಣ್ಯಗಳ ಸಂರಕ್ಷಣೆ ಮಾಡ ಬೇಕು. ಕಾಡು ನಾಶದಿಂದ ಮಳೆ, ಬೆಳೆ ಎಲ್ಲವೂ ಸಂಪೂರ್ಣವಾಗಿ ಕುಂಠಿತವಾಗುತ್ತದೆ. ಹೀಗಿರುವುದರಿಂದ ಪಶ್ಚಿಮ ಘಟ್ಟಗಳನ್ನು ವನ ಸಂಪತ್ತನ್ನು ಕಾಡು ಕಳ್ಳರಿಂದ ರಕ್ಷಿಸಬೇಕು. ಜನತೆಯನ್ನು ಕಾಪಾಡ ಬೇಕು. ಇದು ಪಶ್ಚಿಮ ಘಟ್ಟ ಉಳಿಸಿ, ಪಾದಯಾತ್ರೆಯವರ ಉದ್ದೇಶ, ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಪಾದಯಾತ್ರಿಗಳ ಬಯಕೆಯಂತೆ ಅರಣ್ಯ ನಾಶವನ್ನು ಸಂಪೂರ್ಣವಾಗಿ ನಿಲ್ಲಿಸಿ, ಅರಣ್ಯ ಸಂಪತ್ತನ್ನು ರಕ್ಷಿಸಲು ಸರಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು ? ಅರಣ್ಯ ಸಚಿವರ ಗಮನವನ್ನು ಈ ಬಗ್ಗೆ ಸೆಳೆಯುತ್ತೇನೆ.

ಶ್ರೀ ಜೆ. ಎಸ್. ಬಾಗಲಕೋಟೆ (ರಾಜ್ಯ ಅರಣ್ಯ ಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಇದಿನಬ್ಬ ಅವರು ನಿಯಮ ೩೩ಳಿರ ಮೇರೆಗೆ ಪ್ರಸ್ತಾಪ ಮಾಡಿರುವ ಸೂಚನೆಗೆ ಈ ಕೆಳಕಂಡಂತೆ ನನ್ನ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ಪಶ್ಚಿಮ ಘಟ್ಟ ಉಳಿಸಿ ಕಾಲ್ನಡಿಗೆ" ಸಂಘಟನೆಯ ರಾಜ್ಯದ ಪ್ರತಿನಿಧಿ ಈ ಕಾಲ್ನಡಿಗೆ ಬಗ್ಗೆ ಅರಣ್ಯ ಇಲಾಖೆಗೆ ತಿಳಿಸಿದ್ದಾರೆ. ಇದರಲ್ಲಿ ಅರಣ್ಯ ಅಧಿಕಾರಿಗಳು ಭಾಗವಹಿಸುವಂತೆ ಅವರು ಕೋರಿದ್ದರು. ಸರ್ಕಾರದ ಅರಣ್ಯ ಕಾರ್ಯ ನೀತಿಯನ್ನು ಅರಣ್ಯ ಕಾಮಗಾರಿಯಲ್ಲಿ ಅನುಸರಿಸುತ್ತಿರುವ

ಪದ್ಧತಿಯನ್ನು ಕಾಲ್ನಡಿಗೆಯಲ್ಲಿ ಭಾಗವಹಿಸುತ್ತಿರುವವರಿಗೆ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳು (ಅವರವರ ಅಧಿಕಾರಿ ಕ್ಷೇತ್ರದಲ್ಲಿ) ವಿವರಿಸಿ ತಿಳಿಸಿದ್ದಾರೆ.

ಪಶ್ಚಿಮ ಘಟ್ಟ ಪ್ರದೇಶವು ವಿವಿಧ ಮೂಲಗಳಿಂದ ತೀವ್ರ ಒತ್ತಡ ಎದುರಿಸುತ್ತಿದ್ದರೂ ಈ ಪ್ರದೇಶದಲ್ಲಿ ಕಾದಿಟ್ಟ ಅರಣ್ಯಗಳು ಉತ್ತಮ ಸ್ಥಿತಿಯಲ್ಲಿದೆ. ಈ ಪ್ರದೇಶದಲ್ಲಿ ಶೇಕಡ ೩೦ ರಷ್ಟು ಮಾತ್ರ ಕಾದಿಟ್ಟ ಅರಣ್ಯ ಪ್ರದೇಶವಾಗಿದ್ದು ಉಳಿದ ಶೇಕಡ ೭೦ ರಷ್ಟು ಪ್ರದೇಶ ಕಾದಿಟ್ಟ ಅರಣ್ಯದ ಹೊರಗಿನ ಪ್ರದೇಶವಾಗಿರುತ್ತದೆ. ಈ ಹೊರಗಿನ ಪ್ರದೇಶದಲ್ಲಿ ಖಾಸಗಿ ಮತ್ತು ಇತರ ಪ್ರಿವಿಲೇಜ್ ಪ್ರದೇಶಗಳು ಸೇರಿರುತ್ತವೆ, ಹೆಚ್ಚಿನ ಅಂಶ, ಈ ಪ್ರದೇಶಗಳು ಒಳ್ಳೆಯ ಸ್ಥಿತಿಯಲ್ಲಿ ಇಲ್ಲ. ಪಶ್ಚಿಮ ಘಟ್ಟ ಪ್ರದೇಶದಲ್ಲಿ. ಪರಿಸರ ಸಮತೋಲನೆ ಮೇಲೆ ಪರಿಣಾಮ ಬೀಳುವಂತಹ ಕಾದಿಟ್ಟ ಅರಣ್ಯ ಪ್ರದೇಶವು ಪ್ರೊಟೆಕ್ಷನ್ ವರ್ಕಿಂಗ್ ಸರ್ಕಲ್‌ನಲ್ಲಿ ಸೇರಿಸಲಾಗಿದೆ ಮತ್ತು ಈ ಪ್ರದೇಶಗಳಲ್ಲಿ ಮರ ಕಡಿಯುವುದಿಲ್ಲ. ರಾಜ್ಯದ ಒಳ್ಳೆಯ ಅರಣ್ಯ ಪ್ರದೇಶದಲ್ಲಿ ಸುಮಾರು ೩೨,೮೦೦ ಹೆಕ್ಟೇರ್ ಪ್ರದೇಶವನ್ನು ''ದೇವರ ಕಾಡು'' ಎಂದು ಗುರುತಿಸಿ, ಪೂರ್ಣ ಸಂರಕ್ಷಣೆ ನೀಡಲು ಉದ್ದೇಶಿಸಲಾಗಿದೆ.

ನೈಸರ್ಗಿಕ ಅರಣ್ಯ ಪ್ರದೇಶದಲ್ಲಿ ವಾರ್ಷಿಕವಾಗಿ ಲಭ್ಯವಾಗುವ ಮರಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮರಗಳ ಸಂಗ್ರಹಣ ಮಾಡಲಾಗುತ್ತಿದೆ. ಇದರಿಂದ ಜನರಿಗೆ ಮತ್ತು ಸ್ವಲ್ಪಮಟ್ಟಿಗೆ ಕಾರ್ಖಾನೆಗಳಿಗೆ ಪೂರೈಸಲಾಗುತ್ತಿದೆ. ಕರ್ನಾಟಕದಲ್ಲಿ ಕಳೆದ ೧೦ ವರ್ಷಗಳ ಹಿಂದೆ ಮಾಡಿದ ಮರದ ಸಂಗ್ರಹಣೆ ಪ್ರಮಾಣಕ್ಕೆ ಹೋಲಿಸಿದಲ್ಲಿ ಇದರ ೧/೩ ಭಾಗ ಮಾತ್ರ ಮರ ಈಗ ಸಂಗ್ರಹವಾಗಿರುತ್ತದೆ. ಅರಣ್ಯಗಳ ಕಾಮಗಾರಿಯಲ್ಲಿ ಅನುಸರಿಸಿದ ಸಂರಕ್ಷಣಾ ವಿಧಾನಗಳಿಂದ ಮರದ ಸಂಗ್ರಹಣ ಕಡಿಮೆಯಾಗಿದೆ. ಈ ಕೆಳಗೆ ನೀಡಿದ ಕೋಷ್ಟಕವು ಈ ವಿಷಯವನ್ನು ಸ್ಪಷ್ಟ ಪಡಿಸುತ್ತದೆ.

ಮರದ ವಿವರ		ಸಂಗ್ರಹ ಮಾಡಿದ ಮರದ ಪ್ರಮಾಣ			
		೧೯೭೬–೭೭ರಲ್ಲಿ		೧೯೮೫–೮೬ರಲ್ಲಿ	
೧	ಬೀಟೆ ಮತ್ತು ತೇಗ ಮರ	೭೮,೬೦೬	ಘ.ಮೀ.	೧೬,೩೭೭	ಘ.ಮೀ.
೨	ಕೊರದ ಮರ ಮತ್ತು ಸ್ಲೀಪರ್‌ಗಳು	೭೨,೬೯೨	,,	೨,೦೭೬	,,
೩	ಇತರ ಮರಗಳಂ	೪,೯೩,೪೦೭	,,	೧,೩೮,೯೦೦	,,
೪	ಪಲ್ಪ್ ವುಡ್	೫,೪೬,೮೨೬	,,	೨,೦೭,೯೬೯	,,
೫	ಪ್ಲೈವುಡ್ ಮತ್ತು ಮ್ಯಾಚ್‌ವುಡ್	೧,೧೬,೯೫೩	,,	೭೬,೭೧೦	,,
೬	ಕಂಬಗಳು	೯೯,೭೫೮	,,	೩೦,೬೩೮	,,
೭	ಸೌದೆ	೧೭,೧೧,೪೬೨	,,	೪,೯೯,೦೨೯	,,
೮	ಬಿದಿರು	೧,೬೮ ೮೮೨	ಟನ್	೬೮,೮೧೪	ಟನ್
		೩೧,೧೯,೬೮೪	,,	೯,೫೧ ೬೫೦	,,

ನಮ್ಮ ರಾಜ್ಯದ ಶಿಫಾರಸ್ಸಿನಂತೆ ಮರದ ಮೇಲೆ ಆಮದು ಶುಲ್ಕವನ್ನು ಶೇಕಡ ೮೫ ರಿಂದ ಶೇಕಡ ೧೦ಕ್ಕೆ ಕೇಂದ್ರ ಸರ್ಕಾರಕ್ಕೆ ಕಡಿಮೆ ಮಾಡಿದೆ. ಇದರ ಪರಿಣಾಮವಾಗಿ ಸುಮಾರು ೧.೫೦,೦೦೦ ಘ.ಮೀ ಮರವನ್ನು ಈಗ ರಾಜ್ಯದಲ್ಲಿ ಆಮದು ಮಾಡಿಕೊಳ್ಳಲಾಗುತ್ತಿದೆ. ಇದಕ್ಕೆ ಹೋಲಿಸಿದಲ್ಲಿ ರಾಜ್ಯದ ನಿತ್ಯ ಹರಿದ್ವರ್ಣ ಕಾಡುಗಳಿಂದ ಕೇವಲ ೬೦,೦೦೦ ಘ.ಮೀ. ಮರ ಇಲಾಖಾತಿಯಿಂದ ಸಂಗ್ರಹವಾಗುತ್ತಿತ್ತು.

ಈಗಾಗಲೇ ಹೇಳಿರುವಂತೆ, ಪಶ್ಚಿಮ ಘಟ್ಟ ಪ್ರದೇಶವು ವಿವಿಧ ಮೂಲಗಳಿಂದ ಒತ್ತಡವನ್ನು ಎದುರಿಸುತ್ತಿದೆ. ಇದರಲ್ಲಿ ವ್ಯವಸಾಯಕ್ಕಾಗಿ, ಮೈನಿಂಗ್‌ಗಾಗಿ, ವಿದ್ಯುತ್ ಯೋಜನೆ ಮತ್ತು ಇತರ ಕಲ್ಯಾಣ ಯೋಜನೆಗಳಿಗೆ ಬಿಡುಗಡೆ ಮಾಡಿದ ಅರಣ್ಯ ಪ್ರದೇಶಗಳು ಸೇರಿರುತ್ತವೆ. ಇದರ ಪರಿಣಾಮವನ್ನು ನಿವಾರಿಸಲು ಮತ್ತು ಕಾದಿಟ್ಟ ಅರಣ್ಯದ ಹೊರಗಿನ ಪ್ರದೇಶದಲ್ಲಿ ಆಗಿರುವ ನಷ್ಟವನ್ನು ಪರಿಹರಿಸಲು ನಿತ್ಯ ಹರಿದ್ವರ್ಣ ಮತ್ತು ಅರೆ ನಿತ್ಯ ಹರಿದ್ವರ್ಣ ಕಾಡುಗಳಲ್ಲಿ ಮರಗಳ ಕಡಿತಲೆ ನಿಲ್ಲಿಸಲು ಆಲೋಚಿಸಲಾಗಿದೆ.

ಪಶ್ಚಿಮ ಘಟ್ಟದಲ್ಲಿ ನೈಸರ್ಗಿಕ ಅರಣ್ಯಗಳ ಉಳಿವಿಗೆ ಕೈಗೊಂಡ ಕ್ರಮಗಳು ಅಲ್ಲದೇ ಕೇಂದ್ರ ಸರ್ಕಾರದ ನೆರವಿನಿಂದ ಪಶ್ಚಿಮ ಘಟ್ಟದ ಅರಣ್ಯಗಳ ಅಭಿವೃದ್ಧಿಗಾಗಿ "ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ" ಯನ್ನು ಜಾರಿಗೆ ತರಲಾಗಿದೆ.

ಇಲ್ಲಿ ನಾನೊಂದು ವಿಷಯ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಹೆಚ್ಚಿನ ಪ್ರಮಾಣದಲ್ಲಿ ಹಲ್ಲು ಮೇಯ್ಯುವಿಕೆ, ಅರಣ್ಯಗಳಿಗೆ ಬೆಂಕಿಯಿಂದ ಉಂಟಾದ ನಷ್ಟ ಮತ್ತು ತಲೆ ಹೊರೆ ಮೇಲೆ ಸೌದೆಯನ್ನು ಸಾಗಿಸುವುದರಿಂದ ಅರಣ್ಯಗಳಿಗೆ ಹಾನಿ ಉಂಟಾಗಲು ಮುಖ್ಯ ಕಾರಣಗಳು. ಅರಣ್ಯಗಳಿಗೆ ಬೆಂಕಿಯಿಂದ ಆಗುವ ನಷ್ಟವನ್ನು ತಪ್ಪಿಸಲು ಮೇವು ಬೆಳೆ ಅಭಿವೃದ್ಧಿ ಪಡಿಸಲು, ಒಂದು ಯೋಜನೆ ಕೈಗೊಳ್ಳಲು ಮತ್ತು ಈ ಯೋಜನೆಗೆ ಸಹಾಯ ನೀಡುವಂತೆ ಕೇಂದ್ರ ಸರ್ಕಾರಕ್ಕೆ ವರದಿ ಕಳಿಸಿದೆ. ಈ ಯೋಜನೆಯಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಹಲ್ಲು ಮೇಯ್ಯುವಿಕೆ ಮತ್ತು ಅರಣ್ಯ ಬೆಂಕಿಯನ್ನು ನಿಯಂತ್ರಿಸಲು ಅನುಕೂಲವಾಗುವುದು ಇಲಾಖೆಯವರು ಕಾದಿಟ್ಟ ಅರಣ್ಯದಿಂದ ಮಾಡುತ್ತಿರುವ ಸೌದೆ ಸಂಗ್ರಹಣ ಎಲ್ಲಾ ಮೂಲಗಳಿಂದ ಸುಮಾರು ೩ ರಿಂದ ೪ ಲಕ್ಷ ಟನ್ ಮಾತ್ರ. ಆದರೆ ಕಾಡಿನಿಂದ ತಲೆ ಹೊರೆಯ ಮೇಲೆ ಜನರಿಂದ ಸಾಗಿಸಲಾಗುತ್ತಿರುವ ಸೌದೆಯ ಪ್ರಮಾಣ ಸುಮಾರು ೪೦ ಲಕ್ಷ ಟನ್ ಪಶ್ಚಿಮ ಘಟ್ಟ ಪ್ರದೇಶದಲ್ಲಿಯ ಅರಣ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಅದನ್ನು ಸಂರಕ್ಷಿಸಲು ೫ ವರ್ಷದ ಅವಧಿಯ ರೂ. ೨೦೨ ಕೋಟಿ ವೆಚ್ಚದ ಒಂದು ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನಿಂದ ಕೈಗೊಳ್ಳಲು ಉದ್ದೇಶಿಸಿದೆ. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಸೌದೆ ಮರವನ್ನು ಬೆಳೆಸಲು ಮತ್ತು ಜನರಿಗೆ ಸೌದೆ ಪೂರೈಸಲು ಅನುಕೂಲವಾಗುವ ನಿರೀಕ್ಷಣೆ ಇದೆ.

ಮೊದಲು ಕಾದಿಟ್ಟ ಅರಣ್ಯದ ವಿಸ್ತೀರ್ಣದ ಎರಡಕ್ಕೂ ಹೆಚ್ಚು ಪಟ್ಟು ಜಾಗವನ್ನು ಗ್ರಾಮಾಂತರ ಜನರ ಉರುವಲು ಕಟ್ಟಿಗೆ, ಮೇವು ಮುಂತಾದ ಉಪಯೋಗಕ್ಕಾಗಿ ಬಿಟ್ಟಿತು. ಕಳೆದ ಸಾಧಾರಣ ಇಪ್ಪತ್ತು ವರ್ಷದವರೆಗೆ ಸ್ವೇಚ್ಛೆಯಾಗಿ ಜಾನುವಾರು ಮೇಯಿಗಾಗಲೀ, ತಲೆ ಹೊರೆಯಲ್ಲಿ ಸೌದೆ ತೆಗೆಯುವುದಕ್ಕಾಗಲೀ ಅವಕಾಶವಿರಲಿಲ್ಲ. ಈಗ ರಕ್ಷಿಸಿದ ಅರಣ್ಯದ ಹೊರಗಿದ್ದ ಡಿಸ್ಟ್ರಿಕ್ಟ್ ಫಾರೆಸ್ಟ್, ವೆಸ್ಟ್ ಲ್ಯಾಂಡ್, ಮುಂತಾದ ಸ್ಥಳಗಳೆಲ್ಲಾ ವ್ಯವಸಾಯಕ್ಕಾಗಿ ಉಪಯೋಗಿಸಿ ಅಥವಾ ಪೂರ್ಣ ಕಡಿತಲೆಯಾಗಿ ಇದ್ದುದರಿಂದ ಹಳ್ಳಿಗಳಲ್ಲಿ ಮೇವಿಗೂ, ಉರುವಲೆಗೂ ರಕ್ಷಿಸಿದ ಅರಣ್ಯವೇ ಆಧಾರವಾಗಿದೆ. ಕಾದಿಟ್ಟ ಅರಣ್ಯವನ್ನು ರಕ್ಷಿಸಿದಂದಿನಿಂದ ಇಂದಿನವರೆಗೆ ಜನ ಸಂಖ್ಯೆ ೩ ಪಟ್ಟು ಜಾನುವಾರು ಎರಡೂವರೆ ಪಾಲು ಹೆಚ್ಚಾಗಿದೆ. ಇದೆಲ್ಲಾ ಕಾರಣದಿಂದ ಅರಣ್ಯದ ಮೇಲೆ ಒತ್ತಡ ಬಹಳ ಹೆಚ್ಚಿದೆ.

ನಮ್ಮ ದೇಶದಲ್ಲಿ ಸಾಧಾರಣ ಶೇಕಡಾ ೮೦ಕ್ಕೂ ಹೆಚ್ಚು ಬೆಳೆದ ಮರವನ್ನು ಉರುವಲಾಗಿ ಉಪಯೋಗಿಸುತ್ತಾರೆ. ಶೇಕಡಾ ೧೦ ರಿಂದ ೧೫ ವರೆಗೆ ಟಿಂಬರ್ (ದೊಡ್ಡ ಮರ) ಗಳಿಗಾಗಿ ಮತ್ತು ಶೇಕಡ ೨ ರಿಂದ ೫ ರವರೆಗೆ ಕಾರ್ಖಾನೆಗಳಿಗೆ ಉಪಯೋಗಿಸಲಾಗುತ್ತಿದೆ.

ರಾಜ್ಯದಲ್ಲಿ ಅರಣ್ಯ ಕಾವಾಡಲು ಅರಣ್ಯ ಸಂಚಾರಿ ರಕ್ಷಕದ ದಳಗಳೂ ಇವೆ. ಇವರ ಕಾರ್ಯಕ್ಕೆ ಅನುಕೂಲವಾಗುವಂತೆ ವೈರ್‌ಲೆಸ್ ಸೆಟ್‌ಗಳನ್ನು, ಬಂದೂಕುಗಳನ್ನೂ, ವಾಹನಗಳನ್ನು ಒಳಪಡಿಸಲಾಗಿದೆ. ಇದೂ ಅಲ್ಲದೆ ರಾಜ್ಯದ ಗಡಿ ಪ್ರದೇಶದಲ್ಲಿ ಅರಣ್ಯ ಕಾಯಲು ವಿಶೇಷ ಪೋಲೀಸ್ ಮತ್ತು ಅರಣ್ಯ ರಕ್ಷಕ ದಳವನ್ನು ಇಡಲಾಗಿದೆ. ಕಾಡಿನೊಳಗೆ ವನ್ಯಪ್ರಾಣಿ ಅನಧಿಕೃತ ಭೇಟಿ ತಪ್ಪಿಸಲು ವಿಶೇಷ ರಕ್ಷಕ ದಳವನ್ನು ಸಹ ಒದಗಿಸಲಾಗಿದೆ. ರಾಜ್ಯದ ಅರಣ್ಯಸಂಪತ್ತು ಅನಧಿಕೃತ ಸಾಗಾಟನೆ ತಡೆಯಲು ಚೆಕ್‌ಪೋಸ್ಟ್‌ಗಳೂ ಕಾರ್ಯಾಚರಣೆಯಲ್ಲಿವೆ.

ನಮ್ಮ ಅರಣ್ಯವನ್ನು ರಕ್ಷಿಸಲು ನಾವು ಹೆಚ್ಚು ಹೆಚ್ಚು ಮರ ಬೆಳೆಸಲು ಕ್ರಮ ಕೈಗೊಳ್ಳಬೇಕಾಗಿದೆ. ಈದಿಸೆಯಲ್ಲಿ ಎಲ್ಲಾ ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿತು. ಮೊನ್ನೆ ದಿವಸ ನೀವು ಹೇಳಿದ್ದೀರಿ ಪವರ್ಸ್ ಪ್ರಿವಿಲೇಜಸ್ ಅಂಡ್ ಅಮಿನಿಟೀಸ್ ಬಿಲ್ ಮೇಲೆ ಮಾತನಾಡಲು ನಾನು ತಪ್ಪಿಗೆ ಅವಕಾಶ ಮಾಡಿ ಕೊಡುತ್ತೇನೆಂದು.

ಅಧ್ಯಕ್ಷರು.—ಯಾವಾಗ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ದಿವಸ ನಾನು ಮತ್ತು ಶ್ರೀಮಾನ್ ವೀರಪ್ಪ ಮೋಯಿಲಿ ಯವರು ಮತ್ತು ಶ್ರೀಮಾನ್ ಬಂಗಾರಪ್ಪನವರು ಈ ವಿಷಯವನ್ನು ರೇಜ್ ಮಾಡಿದಾಗ ಹೇಳಿದಿರಿ ಈ ಬಗ್ಗೆ ತಾವು ಚರ್ಚೆಮಾಡಲು ನಾನು ನಾಳೆ ಅವಕಾಶ ಮಾಡಿಕೊಡುತ್ತೇನೆಂದು.